ಮೈಸೂರ ಗೆಜೆಟ್

ಸರ್ಕಾರದಿಂದ ಫಾಯಿಷ್ ಆದ್ದು.

ಬೆಂಗಳೂರು, ಶನಿವಾರ, ಮಾರ್ಚೀ ತಾ॥ 22, ಸ್ಯ 1884.

ಗಮನ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಇದಕ್ಕೆ ಬೇರೇಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

3ನೇ ಭಾಗ.

ಇಂಡ್ಯಗವರ್ನಮೆಂಟ್, ರೆಸಿಡೆಂಟರು, ಚೀಫ್ ಜಡ್ಜ್ಗೀರುವಗ್ಯೆರೇರಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

ಫಿನಾರ್ಷಿಯಲ್ ಇಲಾಖಾ.

1882ನೇ ಮೈಸೂರು ರೆಯಿಲ್‌ವೇ ಲೋನ್.

ತಾರೀಖು 6ನೇ ಜುಲೈ 1883.

ಲಂಡನ್‌ನಲ್ಲಿ ಬಡ್ಡೀ ಸಲ್ಲತಕ್ಕ ಬಗ್ಯೆ ಷರಾ ಬರೆಯಲ್ಪಡಬಹುದಾದಂತಾ ಸದರೀ ಸಾಲದ ಡಿಬೆಂಚರ್‌ಗಳ ಮೇಲೆ ಲಂಡನ್‌ನಲ್ಲಿ, ಸ್ಟ್ರಾಂಡ್ ಬೀದಿ 59ನೇ ನಂಬರ್ ಕಟ್ಟಣದಲ್ಲಿರುವ ಬ್ಯಾಂಕರ್‌ಗಳಾದ ಮೆಸ್ಸರ್ಸ್ ಕಾಟ್ಸ್ ಅಂಡ್ ಕೋಯವರು ಬಡ್ಡೀಯನ್ನು ಪಾವತೀ ಮಾಡುವ ಬಗ್ಯೆ ಅವರುಗಳೊಡನೆ ಮೈಸೂರು ಗವರ್ನಮೆಂಟಿನವರು ಯೇರ್ಪಾಡು ಮಾಡಿಕೊಂಡಿರುವದರಿಂದ ಲಂಡನ್‌ನಲ್ಲಿ ತಮ್ಮ ಡಿಬೆಂಚರ್‌ಗಳಿಗೆ ಬಡ್ಡೀಯನ್ನು ತೆಗದುಕೊಳ್ಳಲಿಕ್ಕೆ ಯಿಷ್ಟವುಳ್ಳ ಜನಗಳು ತಮ್ಮ ಡಿಬೆಂಚರ್‌ಗಳನ್ನು ಎಷ್ಟೆನ್‌ಮೆಂಟ್ ಯಾನೇ ಷರಾ ಬಗ್ಯೆ ಇದರಡಿ ರುಜು ಮಾಡಿರುವರ ಆಫೀಸಿಗೆ ಕಳುಹಿಸತಕ್ಕದ್ದು.

ಬಡ್ಡೀಯು, ಮದ್ರಾಸ್‌ನಲ್ಲಿ ಮದರಾಸ್ ಬ್ಯಾಂಕಿನ ಮೇಲೆ, ಡ್ಯೂಪ್ಲಿಕೇಟುದ ಡಿವಾಂಡ್ ವಾರಂಟ್ಸ್ ಯೆಂಬ ಚೆಕ್ಕುಗಳ ಮೂಲಕ ರೂಪಾಯಿಗಳಾಗಿ ಕೊಡಲ್ಪಡುವದು.

ಎಷ್ಟೆನ್‌ಮೆಂಟ್ ಬಗ್ಯೆ ಫೀ ಯೇನೂ ಚಾರ್ಜ್ ಮಾಡಲ್ಪಡಲಾರದು.

ಹೆಚ್. ಹಡ್ಸರ್ಸ್,
ಕಾಂಪ್ಟ್ರೋಲರ್.

ತುಮಕೂರು ಡಿಸ್ಟ್ರಿಕ್ಟ್.

ತಾರೀಖು 9ನೇ ಮಾರ್ಚೀ 1884.

ಚಿತ್ರದುರ್ಗ ತಾಲ್ಲೂಕು ಚಾರ್ಜಿನಲ್ಲಿರುವ ಆಸ್ಟಿಂಗ್ ಅಮಲ್‌ದಾರ್ ಪ 3ನೇ ಕ್ಲಾಸ್ ಮಾಜಿಸ್ಟ್ರೇಟ್ ಸಿ. ಎಸ್. ಚಾಂಡಯ್ಯನವರಿಗೆ, ಸಿವಿಲ್ ಪ್ರೊಸಿಜ್ಯೂರ್ ಕೋಡಿನ 23ನೇ ಸೆಕ್ಷನ್ (ಬಿ) ಕ್ಲಾಜ್ ಅನುಸರಿಸಿ ಇದರಡಿ ಕಂಡ ಅಧಿಕಾರಗಳು ಕೊಡಲ್ಪಟ್ಟಿರುತ್ತೆ:—

(1) ಲಾಷ್ ವಿಚಾರಣೆ ಬಗ್ಯೆ ಅಧಿಕಾರ (ಸೆಕ್ಷನ್ 135.)

(2) ಅವರಿಗೆ ದರ್ಖಾಸ್ತು ಮಾಡುವದಕ್ಕೆ ಅಧಿಕಾರವಿರುವ ಮೊಕದ್ದಮೆಗಳಲ್ಲಿ ತಕಸೀರುಗಳ ಫಿರ್ಯಾದುಗಳನ್ನು ದಾಖಲ್ ಮಾಡಿಕೊಳ್ಳುವ ಬಗ್ಯೆ ಅಧಿಕಾರ (ಸೆಕ್ಷನ್ 141.)

(3) ನಿರೋಧ ವಗ್ಯೆರೇಗಳನ್ನು ಅಡ್ಡೀ ಪಡಿಸುವದಕ್ಕೆ ಹುಕ್ಕುಂ ಕೊಡುವ ಬಗ್ಯೆ ಅಧಿಕಾರ (ಸೆಕ್ಷನ್ 518.)

(4) ಹೆಸಿಗೆಗಳು ಬಾರ್‌ಬಾರ್ ನಡಿಯದಂತೆ ಅಡ್ಡಿಪಡಿಸುವದಕ್ಕೆ ಹುಕ್ಕುಂ ಕೊಡುವ ಬಗ್ಯೆ ಅಧಿಕಾರ (ಸೆಕ್ಷನ್ 519.)

ಮಹಮ್ಮದ್‌ಅಲ್ಲಿ, ಕೆ. ಬಿ,
ಡಿಸ್ಟ್ರಿಕ್ಟು ಮಾಜಿಸ್ಟ್ರೇಟ್.